# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕರ್ನಾಟಕ ಸರ್ಕಾರ ಸಚಿವಾಲಯದ ಅಧಿಕಾರಿಗಳ ನಿವಾಸದ ಸ್ಥಿರ ದೂರವಾಣಿ, ಮೊಬೈಲ್ ದೂರವಾಣಿ ವೆಚ್ಚ ಮತ್ತು ಗೃಹ ಪರಿಚಾರಕ ಭತ್ಯೆಯನ್ನು ಮರುಪಾವತಿಸುವ ಬಗ್ಗೆ.

**ಓದಲಾಗಿದೆ:**

1)ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 02 ಬಿಇಎಂ 98, ದಿನಾಂಕ:05-11-1998,
2)ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 407 ಡಿಟಿಎನ್ 2012, ದಿನಾಂಕ: 16.04.2013
3)ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 30(ಎ) ಡಿಟಿಎನ್ 2003, ದಿನಾಂಕ: 26.05.2003
4)ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 30 ಡಿಟಿಎನ್ 2003, ದಿನಾಂಕ: 12.08.2003
5)ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 141 ಡಿಟಿಎನ್ 2012, ದಿನಾಂಕ: 15.05.2012
6)ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 213 ಡಿಟಿಎನ್ 2014, ದಿನಾಂಕ: 31-05-2016
7)ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 18 ಡಿಟಿಎನ್ 2011, ದಿನಾಂಕ: 16-04-2013
8) ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 181 ಡಿಟಿಎನ್ 2016, ದಿನಾಂಕ: 16-01-2017
9) ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 374 ಡಿಟಿಎನ್ 2011, ದಿನಾಂಕ: 03-09-2013
10) ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 326 ಸಿಸೇನಿ 2016, ದಿನಾಂಕ: 20.07.2017
11) ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 160 ಸಿಸೇನಿ 2017, ದಿನಾಂಕ: 21.09.2017
12) ಕರ್ನಾಟಕ ಸರ್ಕಾರ ಸಚಿವಾಲಯ ಅಧಿಕಾರಿಗಳ ಸಂಘದ ಮನವಿ.

************

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಿಂದ (11) ರವರೆಗಿನ ಸರ್ಕಾರಿ ಆದೇಶಗಳನ್ವಯ ಸರ್ಕಾರದ ಮುಖ್ಯ ಕಾರ್ಯದರ್ಶಿ/ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ/ವಿಶೇಷ ಕಾರ್ಯದರ್ಶಿ/ ಅಪರ ಕಾರ್ಯದರ್ಶಿ/ಜಂಟಿ ಕಾರ್ಯದರ್ಶಿ/ಉಪ ಕಾರ್ಯದರ್ಶಿ/ಅಧೀನ ಕಾರ್ಯದರ್ಶಿ/ಶಾಖಾಧಿಕಾರಿ ಹಾಗೂ ತತ್ಸಮಾನ ವೃಂದದ ಅಧಿಕಾರಿಗಳ ನಿವಾಸದ ದೂರವಾಣಿ, ಬ್ರಾಡ್ ಬ್ಯಾಂಡ್, ಮೊಬೈಲ್ ದೂರವಾಣಿ, ಐಪ್ಯಾಡ್ ವೆಚ್ಚ ಮತ್ತು ಗೃಹ ಪರಿಚಾರಿಕೆ ಭತ್ಯೆಯನ್ನು ಬಿಲ್ಲು ಮತ್ತು ರಸೀದಿಗಳನ್ನು ಪಡೆದು ಮಾಸಿಕ ವೆಚ್ಚವನ್ನು ಮರುಪಾವತಿ ಮಾಡಲಾಗುತ್ತಿದೆ.

ಸ್ಥಿರ ದೂರವಾಣಿ, ಸಂಚಾರಿ ದೂರವಾಣಿಗಳ ಕರೆ ಮತ್ತು ಬ್ರಾಡ್ ಬ್ಯಾಂಡ್‌ನ ವೆಚ್ಚ ಹಾಗೂ ಗೃಹ ಪರಿಚಾರಿಕೆ ಭತ್ಯೆಯನ್ನು ಪ್ರಸ್ತುತ ಬಿಲ್ಲುಗಳು ಹಾಗೂ ರಶೀದಿಗಳನ್ನು ಪಡೆದು ಮರುಪಾವತಿಸುತ್ತಿದ್ದು, ಇದರಿಂದ ಅನಗತ್ಯ ಕಡತಗಳ ನಿರ್ವಹಣೆ, ದಾಖಲೆಗಳ ಸಲುವಾಗಿ ಒದಗಿಸುವ ಪ್ರತಿಯಿಂದ ಹೆಚ್ಚು ಕಾಗದ ಬಳಕೆ ಹಾಗೂ ಸಮಯ ವ್ಯಯವಾಗುತ್ತಿದೆ. ಅನಗತ್ಯ ಕಡತ, ಕಾಗದದ ಬಳಕೆ ಹಾಗೂ ಸಮಯ ವ್ಯಯವಾಗುವುದನ್ನು ತಪ್ಪಿಸುವ ಸಲುವಾಗಿ ಯಾವುದೇ ಬಿಲ್ಲು ಮತ್ತು ರಶೀದಿಗಳನ್ನು ಸಲ್ಲಿಸದೆ ನೇರವಾಗಿ "ಸ್ವಯಂ ದೃಢೀಕರಣ ಪ್ರಮಾಣ ಪತ್ರ" ಗಳನ್ನು ಸಲ್ಲಿಸಿ, ನಿಗದಿತ ದೂರವಾಣಿ/ಮೊಬೈಲ್ ಕರೆಗಳ ವೆಚ್ಚ ಹಾಗೂ ಗೃಹ ಪರಿಚಾರಿಕೆ ಭತ್ಯೆಯನ್ನು ಪಡೆಯುವುದರ ಕುರಿತು ತೀರ್ಮಾನಿಸಿ, ಅದರಂತೆ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 44 ರಾಸವಿ 2019, ಬೆಂಗಳೂರು, ದಿನಾಂಕ: 31-07-2019**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರದ ಮುಖ್ಯ ಕಾರ್ಯದರ್ಶಿಯವರು, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು, ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು/ಕಾರ್ಯದರ್ಶಿಯವರು/ವಿಶೇಷ ಕಾರ್ಯದರ್ಶಿ/ಅಪರ ಕಾರ್ಯದರ್ಶಿ/ ಜಂಟಿ

31/7

.....2

ಕಾರ್ಯದರ್ಶಿ/ಉಪ ಕಾರ್ಯದರ್ಶಿ/ಅಧೀನ ಕಾರ್ಯದರ್ಶಿ/ಶಾಖಾಧಿಕಾರಿ ಹಾಗೂ ತತ್ಸಮಾನ ಹುದ್ದೆಯ ಅಧಿಕಾರಿಗಳಿಗೆ ಯಾವ ಯಾವ ಭತ್ಯೆಗಳಿಗೆ ಇಂತಿಷ್ಟೆ ನಿರ್ದಿಷ್ಟ (Fixed Allowances) ಮೊತ್ತವೆಂದು ನಿಗಧಿಗೊಳಿಸಲಾಗಿದೆಯೋ ಅಂತಹ ಭತ್ಯೆಗಳನ್ನು ಮಾತ್ರ ಯಾವುದೇ ಪೂರಕ ದಾಖಲೆಗಳನ್ನು ನೀಡದೆ ಸದರಿ ಮೊತ್ತದಷ್ಟು ಭತ್ಯೆ ವೆಚ್ಚವಾಗಿದೆ ಅಥವಾ ಎಷ್ಟು ಮೊತ್ತ ಸದರಿ ಭತ್ಯೆಗೆ ವೆಚ್ಚವಾಗಿದೆಯೋ ಅಷ್ಟು ಮೊತ್ತವನ್ನು ಈ ಆದೇಶದೊಂದಿಗೆ ಲಗತ್ತಿಸಲಾಗಿರುವ ಅನುಬಂಧದಲ್ಲಿರುವ ಪ್ರಮಾಣಪತ್ರಗಳಲ್ಲಿ ದೃಢೀಕಣರಣವನ್ನು ಸಿಆಸುಇ (ಲೆಕ್ಕಪತ್ರ) ಶಾಖೆಗೆ ಪ್ರತಿ ನಾಲ್ಕು ತಿಂಗಳಿಗೊಮ್ಮೆ ನೇರವಾಗಿ ನೀಡಿ ಮರುಪಾವತಿ ಪಡೆಯಲು ಸರ್ಕಾರ ಮಂಜೂರಾತಿ ನೀಡಿದೆ.

ಈ ವೆಚ್ಚವನ್ನು ಆಯವ್ಯಯ ಲೆಕ್ಕ ಶೀರ್ಷಿಕೆ "2052-00-090-0-01-052-ದೂರವಾಣಿ ವೆಚ್ಚಗಳು" ಮತ್ತು ಗೃಹ ಪರಿಚಾರಿಕೆ ಭತ್ಯೆಯನ್ನು ಲೆಕ್ಕ ಶೀರ್ಷಿಕೆ "2052-00-090-0-01-051-ಸಾಮಾನ್ಯ ವೆಚ್ಚಗಳು" ಇದರಡಿಯಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 464 ವೆಚ್ಚ-12/2019, ದಿನಾಂಕ: 18.07.2019 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬಿ.ಎಸ್. ನಾಗರಾಜ)
ಸರ್ಕಾರದ ಉಪ ಕಾರ್ಯದರ್ಶಿ
ಸಿಆಸುಇ (ಕಾರ್ಯಕಾರಿ)

<u>ಗೆ:</u>

ಸಂಕಲನಕಾರರು, ಕರ್ನಾಟಕ ಗೆಜೆಟ್, ಮುಂದಿನ ಪ್ರಕಟಣೆಯಲ್ಲಿ ಪ್ರಕಟಿಸುವುದಕ್ಕಾಗಿ.

1) ಸರ್ಕಾರದ ಮುಖ್ಯ ಕಾರ್ಯದರ್ಶಿಯವರು/ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು/ವಿಶೇಷ ಕಾರ್ಯದರ್ಶಿಗಳು,
2) ಪ್ರಧಾನ ಮಹಾಲೇಖಪಾಲರು (ಎ ಮತ್ತು ಇ)/(ಜಿ ಮತ್ತು ಎಸ್ಎಸ್ಎ) ಕರ್ನಾಟಕ, ಬೆಂಗಳೂರು.
3) ಖಜಾನಾಧಿಕಾರಿ, ಕರ್ನಾಟಕ ರಾಜ್ಯ ಹುಜೂರ್ ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು
4) ಸರ್ಕಾರದ ಎಲ್ಲಾ ಅಪರ ಕಾರ್ಯದರ್ಶಿಗಳು/ಜಂಟಿ ಕಾರ್ಯದರ್ಶಿಗಳು/ಉಪ ಕಾರ್ಯದರ್ಶಿಗಳು/ ಪಿ.ಎಸ್.ಗ್ರೇಡ್-1 (ಉಪ ಕಾರ್ಯದರ್ಶಿ ದರ್ಜೆ)/ಅಧೀನ ಕಾರ್ಯದರ್ಶಿ/ಪಿ.ಎಸ್.ಗ್ರೇಡ್-2 (ಅಧೀನ ಕಾರ್ಯದರ್ಶಿ ದರ್ಜೆ)/ಶಾಖಾಧಿಕಾರಿ
5) ಅಧೀನ ಕಾರ್ಯದರ್ಶಿ (ವೆಚ್ಚ-12) ಆರ್ಥಿಕ ಇಲಾಖೆ
6) ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ
7) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ
8) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿ
9) ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು
10) ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ
11) ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು
12) ಸರ್ಕಾರದ ಅಧೀನ ಕಾರ್ಯದರ್ಶಿಗಳು, ಸಿಆಸುಇ (ಲೆಕ್ಕಪತ್ರ-1, 2 ಮತ್ತು 3)
13) ಅಧ್ಯಕ್ಷರು, ಕರ್ನಾಟಕ ಸರ್ಕಾರ ಸಚಿವಾಲಯ ಅಧಿಕಾರಿಗಳ ಸಂಘ
14) ಸಂಬಂಧಪಟ್ಟವರೆಲ್ಲರಿಗೂ
15) ಕಛೇರಿ ಪ್ರತಿ/ಶಾಖಾ ರಕ್ಷಾ ಕಡತ /ಹೆಚ್ಚುವರಿ ಪ್ರತಿಗಳು